# D

**CCE PR**
**UNREVISED**
**REDUCED SYLLABUS**
**NSR & NSPR**

**ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯನಿರ್ಣಯ ಮಂಡಲಿ,**
**ಮಲ್ಲೇಶ್ವರಂ, ಬೆಂಗಳೂರು – 560 003**

**KARNATAKA SCHOOL EXAMINATION AND ASSESSMENT BOARD,**
**MALLESHWARAM, BENGALURU – 560 003**

**ಎಸ್.ಎಸ್.ಎಲ್.ಸಿ. ಪರೀಕ್ಷೆ, ಮಾರ್ಚ್ / ಏಪ್ರಿಲ್, 2023**

**S.S.L.C. EXAMINATION, MARCH / APRIL, 2023**

**ಮಾದರಿ ಉತ್ತರಗಳು**

**MODEL ANSWERS**

ದಿನಾಂಕ : 15. 04. 2023 ] **ಸಂಕೇತ ಸಂಖ್ಯೆ : 85-K**

Date : 15. 04. 2023 ] **CODE NO. : 85-K**

# ವಿಷಯ : ಸಮಾಜ ವಿಜ್ಞಾನ

# Subject : SOCIAL SCIENCE

**( ಕನ್ನಡ ಮಾಧ್ಯಮ / Kannada Medium )**
**( ಪುನರಾವರ್ತಿತ ಖಾಸಗಿ ಅಭ್ಯರ್ಥಿ / ಎನ್.ಎಸ್.ಆರ್. & ಎನ್.ಎಸ್.ಪಿ.ಆರ್. )**
**( Private Repeater / NSR & NSPR )**

**[ ಗರಿಷ್ಠ ಅಂಕಗಳು : 100**

**[ Max. Marks : 100**

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| **I.** | **ಬಹು-ಆಯ್ಕೆ ಪ್ರಶ್ನೆ ( ಕ್ರಮಾಕ್ಷರದೊಂದಿಗಿನ ಪ್ರತಿ ಸರಿಯುತ್ತರಕ್ಕೆ 1 ಅಂಕ ) : 8 × 1 = 8** | |
| 1. | ಸಹಾಯಕ ಸೈನ್ಯ ಪದ್ಧತಿಗೆ ಸಹಿ ಮಾಡಿದ ಮೊದಲ ಸಂಸ್ಥಾನ<br>(A) ಔದ್‌ನ ನವಾಬ (B) ಜುನಾಗಢದ ನವಾಬ<br>(C) ಹೈದರಾಬಾದಿನ ನಿಜಾಮ (D) ಗ್ವಾಲಿಯರ್‌ನ ಸಿಂಧಿಯಾ<br>***ಉತ್ತರ :*** (C) ಹೈದರಾಬಾದಿನ ನಿಜಾಮ | 1 |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| 2. | ಗೋವಾ ಭಾರತದ ಒಕ್ಕೂಟಕ್ಕೆ ಸೇರ್ಪಡೆಯಾದುದು<br>(A) 1951 (B) 1961<br>(C) 1953 (D) 1963<br>***ಉತ್ತರ :*** (B) 1961 | 1 |
| 3. | ಭಾರತದ ಮೊದಲ ಮಹಿಳಾ ರಾಷ್ಟ್ರಪತಿ<br>(A) ಇಂದಿರಾ ಗಾಂಧಿ (B) ಪ್ರತಿಭಾಸಿಂಗ್ ಪಾಟೀಲ್<br>(C) ಸುಚೇತಾ ಕೃಪಾಲಾನಿ (D) ದ್ರೌಪದಿ ಮುರ್ಮು<br>***ಉತ್ತರ :*** (B) ಪ್ರತಿಭಾಸಿಂಗ್ ಪಾಟೀಲ್ | 1 |
| 4. | ಅಸ್ಪೃಶ್ಯತೆ ಜಾತಿಯ ಅತ್ಯಂತ ತಿರಸ್ಕಾರಾರ್ಹವಾದ ಅಭಿವ್ಯಕ್ತಿ ಎಂದು ಹೇಳಿದವರು<br>(A) ಮಹಾತ್ಮಾ ಗಾಂಧೀಜಿ (B) ಡಾ. ಬಿ.ಆರ್. ಅಂಬೇಡ್ಕರ್<br>(C) ಜ್ಯೋತಿಬಾ ಫುಲೆ (D) ದಯಾನಂದ ಸರಸ್ವತಿ<br>***ಉತ್ತರ :*** (A) ಮಹಾತ್ಮಾ ಗಾಂಧೀಜಿ | 1 |
| 5. | ರಾಜೇಶನು ಇಪ್ಪತ್ತೈದು ಸಾವಿರ ರೂಪಾಯಿಯ ಟಿ.ವಿ.ಯನ್ನು ಕೊಳ್ಳುತ್ತಾನೆ. ಅದು ಎರಡೇ ದಿನದಲ್ಲಿ ಕೆಟ್ಟುಹೋಗುತ್ತದೆ. ಅವನ ಅಹವಾಲನ್ನು ಟಿ.ವಿ. ಕಂಪನಿ ಮನ್ನಿಸುವುದಿಲ್ಲ. ರಾಜೇಶನು ದೂರು ಸಲ್ಲಿಸಬೇಕಾದ ಗ್ರಾಹಕ ವೇದಿಕೆಯು<br>(A) ಜಿಲ್ಲಾ ಗ್ರಾಹಕ ವೇದಿಕೆ<br>(B) ರಾಜ್ಯ ಗ್ರಾಹಕ ಆಯೋಗ<br>(C) ರಾಷ್ಟ್ರೀಯ ಗ್ರಾಹಕ ಆಯೋಗ<br>(D) ತಾಲೂಕು ಗ್ರಾಹಕ ವೇದಿಕೆ<br>***ಉತ್ತರ :*** (A) ಜಿಲ್ಲಾ ಗ್ರಾಹಕ ವೇದಿಕೆ | 1 |
| 6. | ದೇಶದ ಗಡಿ ರಸ್ತೆಗಳ ನಿರ್ಮಾಣ ಮತ್ತು ನಿರ್ವಹಣೆ ಮಾಡುವವರು<br>(A) ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ<br>(B) ಗಡಿ ಲೋಕೋಪಯೋಗಿ ಇಲಾಖೆ<br>(C) ಭಾರತದ ಗಡಿ ರಕ್ಷಣಾ ಪಡೆಗಳು<br>(D) ಭಾರತದ ಗಡಿ ರಸ್ತೆ ಪ್ರಾಧಿಕಾರ<br>***ಉತ್ತರ :*** (D) ಭಾರತದ ಗಡಿ ರಸ್ತೆ ಪ್ರಾಧಿಕಾರ | 1 |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| 7. | ರಾಷ್ಟ್ರೀಯ ಆದಾಯವನ್ನು ದೇಶದ ಒಟ್ಟು ಜನಸಂಖ್ಯೆಯಿಂದ ಭಾಗಿಸಿದಾಗ ಬರುವುದೇ<br>(A) ತಲಾ ಪೂರೈಕೆ (B) ತಲಾ ಬೇಡಿಕೆ<br>(C) ತಲಾ ಬಳಕೆ (D) ತಲಾ ಆದಾಯ<br>***ಉತ್ತರ :*** (D) ತಲಾ ಆದಾಯ | 1 |
| 8. | ಕೈಗಾ ಅಣು ಸ್ಥಾವರ ವಿರೋಧಿ ಚಳುವಳಿಯ ನಾಯಕತ್ವ ವಹಿಸಿದ್ದವರು<br>(A) ಸುಂದರಲಾಲ ಬಹುಗುಣ (B) ಶಿವರಾಮ ಕಾರಂತ<br>(C) ಮೇಧಾ ಪಾಟ್ಕರ್ (D) ಕುಸುಮ ಸೊರಬ<br>***ಉತ್ತರ :*** (B) ಶಿವರಾಮ ಕಾರಂತ | 1 |
| **II.** | **ಒಂದೊಂದು ವಾಕ್ಯದಲ್ಲಿ ಉತ್ತರಿಸುವುದು : 8 × 1 = 8** | |
| 9. | ವೆಲ್ಲೆಸ್ಲಿಯು ಸಹಾಯಕ ಸೈನ್ಯ ಪದ್ಧತಿಯನ್ನು ಏಕೆ ಜಾರಿಗೆ ತಂದನು ?<br>***ಉತ್ತರ :***<br>— ಬ್ರಿಟಿಷ್ ಸಾಮ್ರಾಜ್ಯವನ್ನು ವಿಸ್ತರಿಸಲು<br>— ಭಾರತೀಯ ರಾಜ್ಯಗಳನ್ನು ನಿಯಂತ್ರಣಕ್ಕೆ ಒಳಪಡಿಸಿಕೊಳ್ಳುವುದು. | 1 |
| 10. | ಭಾರತದ ಪ್ರಥಮ ಸ್ವಾತಂತ್ರ್ಯ ಸಂಗ್ರಾಮಕ್ಕೆ ತತ್‌ಕ್ಷಣದ ಕಾರಣವೇನು ?<br>***ಉತ್ತರ :***<br>ಮಂಗಲಪಾಂಡೆ ಬ್ರಿಟಿಷ್ ಸೈನ್ಯಾಧಿಕಾರಿಯನ್ನು ಕೊಂದನು. | 1 |
| 11. | ಕೋಮುವಾದ ಎಂದರೇನು ?<br>***ಉತ್ತರ :***<br>— ಧರ್ಮದ ಆಧಾರದಲ್ಲಿ ಸಮಾಜದ ವಿಭಜನೆ<br>— ತನ್ನ ಧರ್ಮದ ಮೇಲೆ ಗಾಢವಾದ ಪ್ರೀತಿ<br>— ಧರ್ಮದ ಆಧಾರದಲ್ಲಿ ಗುರುತಿಸಿಕೊಂಡು ಪರಸ್ಪರ ವಿರುದ್ಧ ಹಿತಾಸಕ್ತಿಗಳನ್ನು ಬೆಳಸಿಕೊಳ್ಳುವುದು. ½ + ½ | 1 |
| 12. | ಸಾಮಾಜಿಕ ಸ್ತರ ವಿನ್ಯಾಸ ಎಂದರೇನು ?<br>***ಉತ್ತರ :***<br>ಜನರನ್ನು ವಿಭಿನ್ನ ಸ್ತರಗಳಾಗಿ ವರ್ಗೀಕರಿಸುವ ವ್ಯವಸ್ಥೆಗೆ ಅಥವಾ ಅವರನ್ನು ಏಣಿ ಶ್ರೇಣಿಗಳಿಂದ ವಿಭಿನ್ನ ಸ್ಥಾನಗಳಲ್ಲಿ ವಿಭಾಗಿಸುವ ಕ್ರಮವೇ ಸಾಮಾಜಿಕ ಸ್ತರವಿನ್ಯಾಸ. | 1 |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| 13. | ಕಾಲಬೈಸಾಕಿ ಎಂದರೇನು ?<br>***ಉತ್ತರ :***<br>ಸ್ಥಳೀಯ ಉಷ್ಣಾಂಶ ಮತ್ತು ಪ್ರಚಲನ ಪ್ರವಾಹಗಳಿಂದ ಏಪ್ರಿಲ್-ಮೇ ತಿಂಗಳಲ್ಲಿ ಪಶ್ಚಿಮ ಬಂಗಾಳದಲ್ಲಿ ಬೀಳುವ ಮಳೆ. | 1 |
| 14. | ಮ್ಯಾಂಗ್ರೋವ್ ಅರಣ್ಯಗಳು ಭಾರತದಲ್ಲಿ ಎಲ್ಲಿ ಕಂಡುಬರುತ್ತವೆ ?<br>***ಉತ್ತರ :***<br>ಮ್ಯಾಂಗ್ರೋವ್ ಅರಣ್ಯಗಳು ಅಧಿಕ ಮಳೆ ಬೀಳುವ ಜವುಗು ಪ್ರದೇಶ, ನದಿಮುಖಜ ಭೂಮಿ ಮತ್ತು ಉಬ್ಬರವಿಳಿತಗಳುಳ್ಳ ಸಮುದ್ರ ತೀರಗಳಲ್ಲಿ ಕಂಡುಬರುತ್ತವೆ. | 1 |
| 15. | ರಾಷ್ಟ್ರೀಯ ವರಮಾನ ಎಂದರೇನು ?<br>***ಉತ್ತರ :***<br>ಒಂದು ವರ್ಷದ ಅವಧಿಯಲ್ಲಿ ದೇಶದಲ್ಲಿ ಉತ್ಪಾದಿಸಿದ ಎಲ್ಲಾ ಸರಕು-ಸೇವೆಗಳ ಒಟ್ಟು ಮೌಲ್ಯ. | 1 |
| 16. | ಬ್ಯಾಂಕುಗಳು ತಾವು ನೀಡುವ ಸೇವೆಗೆ ಸೇವಾಶುಲ್ಕ ವಸೂಲು ಮಾಡುವ ಬ್ಯಾಂಕ್‌ಖಾತೆ ಯಾವುದು ?<br>***ಉತ್ತರ :***<br>ಚಾಲ್ತಿ ಖಾತೆ | 1 |
| **III.** | **ಎರಡರಿಂದ ನಾಲ್ಕು ವಾಕ್ಯಗಳಲ್ಲಿ ಉತ್ತರಿಸುವುದು : 18 × 2 = 36** | |
| 17. | ನಿರುದ್ಯೋಗ ನಿವಾರಣೆಗೆ ಭಾರತ ಸರ್ಕಾರ ಕೈಗೊಂಡಿರುವ ಕ್ರಮಗಳೇನು ?<br>**ಅಥವಾ**<br>ಭಯೋತ್ಪಾದನೆ ನಿಗ್ರಹಕ್ಕೆ ಭಾರತ ಕೈಗೊಂಡಿರುವ ಕ್ರಮಗಳಾವವು ?<br>***ಉತ್ತರ :***<br>— ಕೌಶಲ್ಯ ಆಧಾರಿತ ಗುಣಮಟ್ಟದ ಶಿಕ್ಷಣ ನೀಡಿಕೆ<br>— ಸ್ವಯಂ ಉದ್ಯೋಗ ಕೈಗೊಳ್ಳಲು ಮೂಲ ಬಂಡವಾಳ | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯ ಮಾಪನ | ಅಂಕಗಳು |
|---|---|---|
| | — ಸಹಾಯಧನ ನೀಡಿ ಸ್ವಯಂ ಉದ್ಯೋಗಕ್ಕೆ ಪ್ರೋತ್ಸಾಹ<br>— ಕರಕುಶಲ ಕಸಬುಗಳಿಗೆ ಪ್ರೋತ್ಸಾಹ<br>— ತಾಂತ್ರಿಕ ಶಿಕ್ಷಣ ನೀಡುವುದು<br>— ವೃತ್ತಿ ಶಿಕ್ಷಣ ನೀಡುವುದು<br>(ಯಾವುದಾದರೂ ನಾಲ್ಕು) 4 × ½ | 2 |
| | **ಅಥವಾ**<br>— ಭಾರತ ಭಯೋತ್ಪಾದಕತೆಗೆ ತೀವ್ರ ವಿರೋಧ ವ್ಯಕ್ತ<br>— ಕೇಂದ್ರ ಹಾಗೂ ರಾಜ್ಯ ಸರ್ಕಾರ ತೀವ್ರ ಪ್ರಯತ್ನ<br>— ಜನತೆಯ ಪ್ರಾಣ, ಆಸ್ತಿಪಾಸ್ತಿ ಉಳಿಸಲು ಪ್ರಯತ್ನ<br>— ಭೀತಿವಾದಿಗಳ ನಿಗ್ರಹಕ್ಕೆ ವಿಶೇಷ ಪರಿಣತಿ ಪಡೆ ರಚನೆ<br>— ರಕ್ಷಣಾಪಡೆಗಳಿಂದ ಉಗ್ರಗಾಮಿಗಳ ವಿರುದ್ಧ ಕಾರ್ಯಚರಣೆ<br>— ಶಾಂತಿಪ್ರಿಯ ರಾಷ್ಟ್ರ<br>— ಭಯೋತ್ಪಾದನೆ ಜಾಗತಿಕ ಮಟ್ಟದಲ್ಲಿ ವಿರೋಧಿಸುತ್ತದೆ<br>(ಯಾವುದಾದರೂ ನಾಲ್ಕು) 4 × ½ | 2 |
| 18. | ಸಾಮಾಜಿಕ ಸ್ತರವಿನ್ಯಾಸವು ಎಲ್ಲಾ ದೇಶಗಳಲ್ಲೂ ಒಂದೇ ತೆರನಾಗಿಲ್ಲ. ವಿವರಿಸಿ.<br>**ಅಥವಾ**<br>ದೊಂಬಿಯ ಸ್ವರೂಪವನ್ನು ವಿವರಿಸಿ.<br>***ಉತ್ತರ :***<br>— ಆದಾಯ<br>— ಶಿಕ್ಷಣ<br>— ಜಾತಿ | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯ ಮಾಪನ | ಅಂಕಗಳು |
|---|---|---|
| | — ಬಣ್ಣ<br>— ಲಿಂಗ<br>— ಉದ್ಯೋಗ<br>— ಬುದ್ಧಿಶಕ್ತಿ<br>— ಮೇಲು-ಕೀಳು<br>— ದೊರಕುವ ಅವಕಾಶಗಳು<br>— ಶ್ರೀಮಂತರು ಬಡವರು<br>— ಕರಿಯರು ಬಿಳಿಯರು<br>— ಗುಲಾಮರು, ಮಾಲೀಕರು<br>(ಯಾವುದಾದರೂ ನಾಲ್ಕು) 4 × ½ | 2 |
| | **ಅಥವಾ** | |
| | — ಸಿಕ್ಕಿದ್ದೆಲ್ಲವನ್ನೂ ಹಾಳು ಮಾಡುವುದು<br>— ಗೊಂದಲ ಸೃಷ್ಟಿ ಮಾಡುವುದು<br>— ಅಪಾರವಾದ ಹಾನಿಯನ್ನುಂಟು ಮಾಡುವುದು<br>— ಆಕ್ರಮಣದ ನಿಶ್ಚಿತ ಗುರಿ ಇರುವುದಿಲ್ಲ<br>— ಕಾನೂನು ಸುವ್ಯವಸ್ಥೆಗೆ ಗಂಭೀರ ಸವಾಲು<br>— ಪ್ರಚೋದಕ ಸನ್ನಿವೇಶ<br>— ವ್ಯಕ್ತಿಗಳ ಅನಿಯಂತ್ರಿತ ವರ್ತನೆ<br>— ಅನಾಗರಿಕ ನಡವಳಿಕೆ<br>— ಕಲಹ ನಡೆಸುವ ಅಪರಾಧಿ ಗುಣ<br>(ಯಾವುದಾದರೂ ನಾಲ್ಕು) 4 × ½ | 2 |
| 19. | '1909 ರ ಭಾರತೀಯ ಪರಿಷತ್ ಕಾಯ್ದೆಯ ಮೂಲಕ ಬ್ರಿಟಿಷರು ಭಾರತೀಯರನ್ನು ಒಡೆದು ಆಳುವ ನೀತಿ ತೋರಿದರು.' ದೃಢೀಕರಿಸಿ.<br>***ಉತ್ತರ :***<br>— ಕೇಂದ್ರಶಾಸನ ಸಭೆಯ ಸದಸ್ಯರ ಸಂಖ್ಯೆ 60 ಕ್ಕೆ ಏರಿಕೆ<br>— ಪ್ರಾಂತ್ಯಗಳಲ್ಲಿ ಶಾಸನ ಸಭೆಯ ಸದಸ್ಯರ ಸ್ಥಾನ ಹೆಚ್ಚಳ | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯ ಮಾಪನ | ಅಂಕಗಳು |
|---|---|---|
| | — ಮೊದಲ ಬಾರಿಗೆ ಚುನಾವಣೆ ಮೂಲಕ ಆಯ್ಕೆಯಾಗಲು ಅವಕಾಶ<br>— ಮುಸ್ಲಿಮರಿಗೆ ಪ್ರತ್ಯೇಕ ರಾಜಕೀಯ ಪ್ರಾತಿನಿಧ್ಯ ನೀಡಿಕೆ, ಪ್ರತ್ಯೇಕ ಚುನಾವಣಾ ಮತಗಟ್ಟೆ ವ್ಯವಸ್ಥೆ ಜಾರಿ<br>(ಯಾವುದಾದರೂ ಎರಡು) 2 × 1 | 2 |
| 20. | ಭಾರತದ ಪ್ರಥಮ ಸ್ವಾತಂತ್ರ್ಯ ಸಂಗ್ರಾಮದ ಪರಿಣಾಮಗಳೇನು ?<br>**ಉತ್ತರ :**<br>— ಕಂಪನಿಯು ದೇಶಿಯ ರಾಜರೊಂದಿಗೆ ಮಾಡಿಕೊಂಡಿದ್ದ ಒಪ್ಪಂದಗಳ ಅಂಗೀಕಾರ<br>— ಪ್ರಾದೇಶಿಕ ವಿಸ್ತರಣೆಯ ಅಪೇಕ್ಷೆ ಕೈಬಿಡುವುದು<br>— ಭಾರತೀಯರಿಗೆ ಸುಭದ್ರ ಸರ್ಕಾರ ನೀಡುವುದು<br>— ಧಾರ್ಮಿಕ ಸಹಿಷ್ಣುತೆ, ಧಾರ್ಮಿಕ ವಿಷಯಗಳಲ್ಲಿ ಹಸ್ತಕ್ಷೇಪ ಮಾಡುವಂತಿಲ್ಲ<br>— ಪ್ರೀತಿ, ಬೆಂಬಲ, ವಿಶ್ವಾಸವಿಲ್ಲದಿದ್ದರೆ ಶಾಂತಿಯುತ ಆಳ್ವಿಕೆ ಅಸಾಧ್ಯವೆಂದು ಅರಿತರು<br>— ಭಾರತದ ಸ್ವಾತಂತ್ರ್ಯ ಹೋರಾಟಕ್ಕೆ ಹೊಸ ದಿಕ್ಸೂಚಿ<br>— ಕಾನೂನಿನ ಮುಂದೆ ಸಮಾನತೆ<br>— ಈಸ್ಟ್ ಇಂಡಿಯಾ ಕಂಪನಿಯ ಆಡಳಿತ ಕೊನೆಗೊಂಡಿತು<br>— ಭಾರತದ ಆಡಳಿತವನ್ನು ಬ್ರಿಟಿಷ್ ರಾಣಿ ಕೈಗೆತ್ತಿಕೊಂಡಳು<br>(ಯಾವುದಾದರೂ ನಾಲ್ಕು) 4 × ½ | 2 |
| 21. | ಭಾರತದಲ್ಲಿ ನೀರಾವರಿಯು ಅವಶ್ಯಕ. ಏಕೆ ?<br>**ಉತ್ತರ :**<br>— ನೀರಿನ ಲಭ್ಯತೆ ಪ್ರದೇಶದಿಂದ ಪ್ರದೇಶಕ್ಕೆ ವ್ಯತ್ಯಾಸ<br>— ನೀರಿನ ಲಭ್ಯತೆ ಕಾಲದಿಂದ ಕಾಲಕ್ಕೆ ವ್ಯತ್ಯಾಸ<br>— ಭಾರತದಲ್ಲಿ ಮಳೆಯು ಅನಿಶ್ಚಿತ<br>— ಅಸಮಾನ ಮಳೆ ಹಂಚಿಕೆ<br>— ಮಳೆ ಮಾರುತ ಅನಿಯತಕಾಲಿಕ<br>— ಕಡಿಮೆ ಮಳೆ ಬೀಳುವ ಪ್ರದೇಶದಲ್ಲಿ ನೀರಾವರಿ ಅನಿವಾರ್ಯ<br>(ಯಾವುದಾದರೂ ನಾಲ್ಕು) 4 × ½ | 2 |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯ ಮಾಪನ | ಅಂಕಗಳು |
|---|---|---|
| 22. | ಉಷ್ಣ ವಲಯದ ಆವರ್ತ ಮಾರುತಗಳು ಬಹಳ ವಿನಾಶಕಾರಿ. ಏಕೆ ?<br>***ಉತ್ತರ :***<br>— ಕಡಿಮೆ ಒತ್ತಡವುಳ್ಳ ಕೇಂದ್ರದ ಕಡೆಗೆ ಮಾರುತಗಳು ಚಕ್ರಾಕಾರದಲ್ಲಿ ಚಲಿಸುವುದೇ ಆವರ್ತಮಾರುತ.<br>— ನೈಸರ್ಗಿಕ ವಿಪತ್ತು ವಾಯುಗೋಳಕ್ಕೆ ಸಂಬಂಧಿಸಿದೆ.<br>— ಆವರ್ತಮಾರುತಗಳಲ್ಲಿ ಎರಡು ವಿಧ i) ಉಷ್ಣವಲಯದ ಆವರ್ತಮಾರುತ ii) ಸಮಶೀತೋಷ್ಣವಲಯದ ಆವರ್ತಮಾರುತಗಳು<br>— ಉಷ್ಣವಲಯದ ಆವರ್ತಮಾರುತಗಳ ಉಗಮ ಮತ್ತು ಬೆಳವಣಿಗೆಗೆ ಕಾರಣವಾದ ಪರಿಸ್ಥಿತಿಗಳು i) ಅಧಿಕ ಉಷ್ಣಾಂಶ, ii) ಪ್ರಶಾಂತ ವಾಯು, iii) ಹೆಚ್ಚು ತೇವಾಂಶ ಭರಿತ ವಾಯು.<br>— ಸುತ್ತಲಿನ ಅಧಿಕ ಒತ್ತಡ ಪ್ರದೇಶದಿಂದ ಕಡಿಮೆ ಒತ್ತಡದ ಕೇಂದ್ರದ ಕಡೆಗೆ ಚಕ್ರಾಕಾರದಲ್ಲಿ ಮಾರುತಗಳು ಬೀಸುವುದರಿಂದ ಆವರ್ತಮಾರುತ ಅಥವಾ ಸೈಕ್ಲೋನ್‌ಗಳು ಸಂಭವಿಸುತ್ತವೆ.<br>— ಉಷ್ಣವಲಯದ ಆವರ್ತಮಾರುತಗಳು ಬಹಳ ವಿನಾಶಕಾರಿಯಾದವು. ಅವು ಸಾವು ಮತ್ತು ಆಸ್ತಿಗಳಿಗೆ ಹಾನಿಯನ್ನುಂಟುಮಾಡುತ್ತವೆ.<br>— ಕಟ್ಟಡಗಳಿಗೆ ಧಕ್ಕೆ, ಸಾರಿಗೆ ಮತ್ತು ಸಂಪರ್ಕ ಮಾಧ್ಯಮಗಳನ್ನು ಅಸ್ತವ್ಯಸ್ತಗೊಳಿಸುತ್ತವೆ.<br>— ವಿದ್ಯುತ್ ಸರಬರಾಜಿಗೆ ಅಡಚಣೆ<br>— ಬೆಳೆಗಳು, ಸ್ವಾಭಾವಿಕ ಸಸ್ಯವರ್ಗ, ಪ್ರಾಣಿ ಸಂಕುಲ ಮೊದಲಾದವುಗಳಿಗೆ ಹಾನಿಯನ್ನುಂಟುಮಾಡವವು.<br>(ಯಾವುದಾದರೂ ನಾಲ್ಕು) 4 × ½ | 2 |
| 23. | ಅನಾಭಿವೃದ್ಧಿ ದೇಶಗಳ ಪ್ರಮುಖ ಲಕ್ಷಣಗಳಾವವು ?<br>***ಉತ್ತರ :***<br>— ಉತ್ಪಾದನೆ ಕಡಿಮೆ<br>— ಜನಸಂಖ್ಯೆ ಅಪಾರ<br>— ತಲಾ ವರಮಾನ ಬಹಳ ಕಡಿಮೆ | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯ ಮಾಪನ | ಅಂಕಗಳು |
|---|---|---|
| | — ಬಡತನ<br>— ನಿರುದ್ಯೋಗ<br>— ಅಸಮಾನತೆ<br>— ಹಣದುಬ್ಬರ<br>— ಆರೋಗ್ಯ ಸೌಲಭ್ಯಗಳ ಕೊರತೆ<br>(ಯಾವುದಾದರೂ ನಾಲ್ಕು) $4 \times \frac{1}{2}$ | 2 |
| 24. | ಗ್ರಾಹಕ ರಕ್ಷಣಾ ಕಾಯ್ದೆಯ ಮುಖ್ಯ ಉದ್ದೇಶಗಳೇನು ?<br>***ಉತ್ತರ :***<br>— ಸುರಕ್ಷತೆ ಹಾಗೂ ಗುಣಮಟ್ಟಕ್ಕೆ ಮೊದಲ ಆದ್ಯತೆ<br>— ಅಪಾಯಕಾರಿ ವಸ್ತುಗಳ ತಯಾರಿಕೆ ಹಾಗೂ ಮಾರಾಟ ತಪ್ಪಿಸುವುದು<br>— ಮಾರುಕಟ್ಟೆಯಲ್ಲಿ ಅನುಚಿತ ವ್ಯವಹಾರ ಪದ್ಧತಿ ತಡೆ<br>— ಗುಣಮಟ್ಟ ಅಳತೆಗಳ ಮೇಲೆ ಗಮನ<br>— ತೂಕ ಮತ್ತು ಬೆಲೆಗಳ ಮೇಲೆ ಗಮನ<br>— ಖರೀದಿಸಿದ ವಸ್ತು ಅಥವಾ ಸೇವೆಗಳಿಂದ ತೊಂದರೆಗೆ ಒಳಗಾದಲ್ಲಿ ಸೂಕ್ತ ಪರಿಹಾರ<br>— ಗ್ರಾಹಕ ಶಿಕ್ಷಣದ ನೀಡುವ ಮೂಲಕ ಜನರಲ್ಲಿ ಜಾಗೃತಿ<br>(ಯಾವುದಾದರೂ ನಾಲ್ಕು) $4 \times \frac{1}{2}$ | 2 |
| 25. | ದತ್ತುಮಕ್ಕಳಿಗೆ ಹಕ್ಕಿಲ್ಲ ನೀತಿಯಡಿ ವಶಪಡಿಸಿಕೊಂಡ ಪ್ರಾಂತೀಯ ರಾಜ್ಯಗಳನ್ನು ಹೆಸರಿಸಿ.<br>***ಉತ್ತರ :***<br>— ಸತಾರ<br>— ಜೈಪುರ್<br>— ಸಂಬಲ್‌ಪುರ್<br>— ಉದಯಪುರ್<br>— ಝೂನ್ಸಿ<br>— ನಾಗಪುರ<br>(ಯಾವುದಾದರೂ ನಾಲ್ಕು) $4 \times \frac{1}{2}$ | 2 |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯ ಮಾಪನ | ಅಂಕಗಳು |
|---|---|---|
| 26. | ಮೂರನೇ ಆಂಗ್ಲೋ-ಮೈಸೂರು ಯುದ್ಧದ ಪರಿಣಾಮಗಳೇನು ?<br>***ಉತ್ತರ :***<br>— ಶ್ರೀರಂಗಪಟ್ಟಣ ಒಪ್ಪಂದ<br>— ಟಿಪ್ಪು ಅರ್ಧ ರಾಜ್ಯ ಬಿಟ್ಟುಕೊಡುವುದು<br>— ಮೂರು ಕೋಟಿ ರೂಪಾಯಿ ಯುದ್ಧನಷ್ಟ ಪರಿಹಾರ<br>— ಇಬ್ಬರು ಮಕ್ಕಳ ಒತ್ತೆ<br>— ಸೆರೆಹಿಡಿಯಲಾದ ಸೈನಿಕರ ಬಿಡುಗಡೆ 4 × ½ | 2 |
| 27. | ಸಾಮಾಜಿಕ ಸುಧಾರಣೆಗೆ ಆನಿಬೆಸೆಂಟರ ಕೊಡುಗೆಗಳೇನು ?<br>***ಉತ್ತರ :***<br>— ಥಿಯಾಸಾಫಿಕಲ್ ಸೊಸೈಟಿಯ ಕಾರ್ಯಚಟುವಟಿಕೆ ಭಾರತದಲ್ಲಿ ಪ್ರಾರಂಭ<br>— ಉಪನ್ಯಾಸಗಳ ಮೂಲಕ ಸಂಸ್ಕೃತಿಯ ಬಗ್ಗೆ ಅಭಿಮಾನ<br>— ಸಮಾನತೆ<br>— ವಿಶ್ವ ಸೋದರತೆ<br>— ಸಾಮರಸ್ಯ ಸಾಧಿಸಲು ಪ್ರಯತ್ನ<br>— ಸ್ವಾತಂತ್ರ್ಯ ಚಳುವಳಿಗೆ ಬೆಂಬಲ<br>— ನ್ಯೂ ಇಂಡಿಯಾ ಪತ್ರಿಕೆ ಪ್ರಾರಂಭ<br>— ಹೋಂ ರೂಲ್ ಚಳುವಳಿ<br>— 1917 ರ ಕಾಂಗ್ರೆಸ್ ಅಧಿವೇಶನ ಅಧ್ಯಕ್ಷೆ<br>(ಯಾವುದಾದರೂ ನಾಲ್ಕು) 4 × ½ | 2 |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯ ಮಾಪನ | ಅಂಕಗಳು |
|---|---|---|
| 28. | ಭಾರತದಲ್ಲಿ ಮಾನವ ಅಭಿವೃದ್ಧಿ ಸೂಚ್ಯಂಕ ಕಡಿಮೆ ಇರುವುದಕ್ಕೆ ಕಾರಣಗಳೇನು ?<br>**ಉತ್ತರ :**<br>— ಭಾರತ ಇನ್ನೂ ಅಭಿವೃದ್ಧಿ ಹೊಂದುತ್ತಿರುವ ರಾಷ್ಟ್ರ<br>— ಭಾರತೀಯರಲ್ಲಿ ಆರೋಗ್ಯ ಮಟ್ಟ ಕಡಿಮೆ<br>— ಜೀವಿತಾವಧಿ ಕಡಿಮೆ<br>— ಸಾಕ್ಷರತಾ ಪ್ರಮಾಣ ಕಡಿಮೆ<br>— ಖರೀದಿ ಶಕ್ತಿಯು ಕಡಿಮೆ<br>— 2014 ರ ಪ್ರಕಾರ 187 ರಾಷ್ಟ್ರಗಳ ಪೈಕಿ 135 ಸ್ಥಾನ ಪಡೆದಿತ್ತು<br>(ಯಾವುದಾದರೂ ನಾಲ್ಕು) $4 \times \frac{1}{2}$ | 2 |
| 29. | ವಿದೇಶಾಂಗ ನೀತಿಯು ರಾಷ್ಟ್ರದ ಅಭಿವೃದ್ಧಿಗೆ ಸಹಕಾರಿ ಹೇಗೆ ?<br>**ಉತ್ತರ :**<br>— ಅಂತಾರಾಷ್ಟ್ರೀಯ ಶಾಂತಿ, ಸುಭದ್ರತೆಯನ್ನು ವೃದ್ಧಿಸುತ್ತದೆ.<br>— ಅನ್ಯ ರಾಷ್ಟ್ರಗಳೊಂದಿಗೆ ವ್ಯಾಪಾರ, ವ್ಯವಹಾರ ಉತ್ತಮಪಡಿಸುತ್ತದೆ.<br>— ಜನಸಂಖ್ಯೆ ಮಾನವ ಸಂಪನ್ಮೂಲವಾಗಿ ಪರಿವರ್ತಿಸುತ್ತದೆ.<br>— ಪ್ರಾಕೃತಿಕ ಸಂಪತ್ತನ್ನು ಸರಿಯಾಗಿ ಬಳಸಲು ಸಹಕಾರಿ<br>— ಔದ್ಯೋಗಿಕ ಸಾಮರ್ಥ್ಯ ಹೆಚ್ಚಿಸುತ್ತದೆ<br>— ಬಲಾಢ್ಯ ಸೈನ್ಯಕ್ಕೆ ಸಹಕಾರಿ<br>(ಯಾವುದಾದರೂ ನಾಲ್ಕು) $4 \times \frac{1}{2}$ | 2 |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯ ಮಾಪನ | ಅಂಕಗಳು |
|---|---|---|
| 30. | ಸಂಭಾವನೆ ರಹಿತ ಮತ್ತು ಸಂಭಾವನೆ ಸಹಿತ ದುಡಿಮೆಯ ವ್ಯತ್ಯಾಸಗಳೇನು ? | |

***ಉತ್ತರ :***

| ***ಸಂಭಾವನೆ ರಹಿತ*** | ***ಸಂಭಾವನೆ ಸಹಿತ*** |
|---|---|
| — ದುಡಿಮೆಗೆ ಸಂಭಾವನೆ ಅಥವಾ ವಸ್ತು ರೂಪದಲ್ಲಿ ಪ್ರತಿಫಲ ಇಲ್ಲದಿವುದು. | — ದುಡಿಮೆಗೆ ಸಂಭಾವನೆ ಅಥವಾ ವಸ್ತು ರೂಪದಲ್ಲಿ ಪ್ರತಿಫಲ ಇರುವುದು. |
| — ಕುಟುಂಬದ ಸದಸ್ಯರ ಒಳಗೆ ಸಹಕಾರ, ಸ್ವಯಂ ಪ್ರೇರಣೆ, ಪ್ರೀತಿಯಿಂದ ಮಾಡುವ ದುಡಿಮೆ. | — ವ್ಯಾಪಾರ, ಹೊಲ, ಗದ್ದೆಗಳ, ಇಟ್ಟಿಗೆ, ಬಟ್ಟೆಗಳಲ್ಲಿ, ಕೈಗಾರಿಕೆ, ಶಿಕ್ಷಕರಾಗಿ ದುಡಿಮೆ |

2 × 1 — 2

31. ಕರಾವಳಿ ಬಯಲಿನ ಆರ್ಥಿಕ ಪ್ರಾಮುಖ್ಯತೆ ಏನು ?

***ಉತ್ತರ :***

— ಮೀನುಗಾರಿಕೆ

— ನೈಸರ್ಗಿಕ ಬಂದರುಗಳಿಗೆ ಪೂರಕ

— ಹಡಗು ನಿರ್ಮಾಣ ಕೈಗಾರಿಕೆ

— ಉಪ್ಪು ಉತ್ಪಾದನೆ

— ಉಪ್ಪು ನೌಕಾಯಾನ

— ಆಕರ್ಷಕ ಬೀಚ್‌ಗಳಿಂದ ಪ್ರವಾಸೋದ್ಯಮ

— ಕೃಷಿ ಚಟುವಟಿಕೆಗಳಿಗೂ ಸಹಕಾರಿ

(ಯಾವುದಾದರೂ ನಾಲ್ಕು) 4 × ½ — 2

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯ ಮಾಪನ | ಅಂಕಗಳು |
|---|---|---|
| 32. | ಅಲ್ಯುಮಿನಿಯಂ ಕೈಗಾರಿಕೆಗಳ ಕೇಂದ್ರೀಕರಣಕ್ಕೆ ಪೂರಕವಾದ ಅಂಶಗಳಾವವು ?<br>**ಉತ್ತರ :**<br>— ಮೂಲ ಕಚ್ಚಾವಸ್ತು ಬಾಕ್ಸೈಟ್ ಲಭ್ಯತೆ<br>— ಜಲ ವಿದ್ಯುಚ್ಛಕ್ತಿ ಪೂರೈಕೆ<br>— ಬಂಡವಾಳ<br>— ವಿಶಾಲ ಮಾರುಕಟ್ಟೆ<br>— ನುರಿತ ಕಾರ್ಮಿಕರ ಲಭ್ಯತೆ<br>— ಸಾರಿಗೆ ಸಂಪರ್ಕ ವ್ಯವಸ್ಥೆ<br>— ಸರ್ಕಾರದ ನೀತಿಗಳು<br>(ಯಾವುದಾದರೂ ನಾಲ್ಕು) 4 × ½ | 2 |
| 33. | ಗ್ರಾಮೀಣ ಅಭಿವೃದ್ಧಿ ದೇಶದ ಅಭಿವೃದ್ಧಿ ದೃಢೀಕರಿಸಿ.<br>**ಉತ್ತರ :**<br>— ಕೃಷಿ ಹಾಗೂ ಕೃಷಿಯೇತರ ವಲಯಗಳ ಅಭಿವೃದ್ಧಿ<br>— ಅಧಿಕ ಕೃಷಿ ವರಮಾನ<br>— ಔದ್ಯಮಿಕ ಸರಕು ಸೇವೆಗಳ ಬೇಡಿಕೆ ಹೆಚ್ಚಳ<br>— ಅಧಿಕ ಉದ್ಯೋಗ ಸೃಷ್ಟಿ<br>— ಅಧಿಕ ಶಿಕ್ಷಣ, ಕೌಶಲ್ಯಗಳಿಂದ ಹೆಚ್ಚಿನ ಉತ್ಪಾದನೆ<br>— ಉತ್ತಮ ಆರೋಗ್ಯ<br>— ಜನರ ಕೆಲಸದ ಸಹಭಾಗಿತ್ವದ ಪ್ರಮಾಣ ಹೆಚ್ಚಳ<br>— ರಾಷ್ಟ್ರೀಯ ಉತ್ಪನ್ನ ಹೆಚ್ಚಳ<br>— ಸಣ್ಣ ಕೈಗಾರಿಕೆಗಳ ಅಭಿವೃದ್ಧಿ<br>— ಕೃಷಿ ಸಂಸ್ಕರಣಾ ಚಟುವಟಿಕೆಗಳು<br>— ಬಡತನ ಇಳಿಕೆಗೆ ಕಾರಣ<br>(ಯಾವುದಾದರೂ ನಾಲ್ಕು) 4 × ½ | 2 |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| 34. | ಬ್ಯಾಂಕ್ ಖಾತೆಯ ವಿಧಗಳನ್ನು ಪಟ್ಟಿಮಾಡಿ.<br>**ಉತ್ತರ :**<br>— ಉಳಿತಾಯ ಖಾತೆ<br>— ಚಾಲ್ತಿ ಖಾತೆ<br>— ಆವರ್ತ ಠೇವಣಿ ಖಾತೆ<br>— ನಿಶ್ಚಿತ ಠೇವಣಿ ಖಾತೆ 4 × ½ | 2 |
| **IV.** | **ಆರು ವಾಕ್ಯಗಳಲ್ಲಿ ಉತ್ತರಿಸುವುದು : 9 × 3 = 27** | |
| 35. | ಆಂಗ್ಲರ ವಿರುದ್ಧ ಹಲಗಲಿ ಬೇಡರ ಹೋರಾಟವನ್ನು ವಿವರಿಸಿ.<br>**ಉತ್ತರ :**<br>— ಮುಧೋಳ ಸಂಸ್ಥಾನದ ಒಂದು ಪುಟ್ಟಗ್ರಾಮ ಹಲಗಲಿ<br>— ಬ್ರಿಟಿಷರು ಶಸ್ತ್ರ ಬಳಕೆಯ ನಿರ್ಬಂಧ ಕಾನೂನು ಜಾರಿ<br>— ಹಲಗಲಿ ಬೇಡರು ತಲೆತಲಾಂತರಗಳಿಂದ ಬೇಟೆಯಾಡಲು ಬಂದೂಕು ಬಳಕೆ<br>— ಹಲಗಲಿ ಬೇಡರು ಶಸ್ತ್ರವನ್ನು ಒಪ್ಪಿಸಲು ನಿರಾಕರಣೆ<br>— ತಮ್ಮ ಹಕ್ಕು ಉಳಿಸಿಕೊಳ್ಳಲು ಬ್ರಿಟಿಷರ ವಿರುದ್ಧ ಸಿಡಿದೆದ್ದರು<br>— ಮಂಟೂರು, ಬೇದಾನ, ಆಲಗುಂಡಿ ಗ್ರಾಮಗಳ ಬೇಡರು ಸೇರ್ಪಡೆಗೊಂಡು ಬಂಡಾಯ<br>— ಬಂಡಾಯ ಹತ್ತಿಕ್ಕಲು ನವೆಂಬರ್‌ನಲ್ಲಿ ಬ್ರಿಟಿಷ್ ಸೇನೆ ಹಲಗಲಿ ಗ್ರಾಮ ಪ್ರವೇಶ<br>— ನಿಷ್ಕಾರುಣ್ಯಕರ, ದಮನಕಾರಿಯಾಗಿ ಬ್ರಿಟಿಷರು ಹತ್ತಿಕ್ಕಿದರು<br>— ಬಂಡಾಯಗಾರರನ್ನು ಗಲ್ಲಿಗೇರಿಸಿ ಬಂಡಾಯ ಅಂತ್ಯ<br>(ಯಾವುದಾದರೂ ಆರು) 6 × ½ | 3 |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯ ಮಾಪನ | ಅಂಕಗಳು |
|---|---|---|
| 36. | ಬಕ್ಸಾರ್ ಕದನದ ಪರಿಣಾಮಗಳನ್ನು ತಿಳಿಸಿ.<br>***ಉತ್ತರ :***<br>— ಬಂಗಾಳದ ಮೇಲಿನ ದಿವಾನಿ ಹಕ್ಕು ನೀಡಿದರು<br>— ಷಾ ಅಲಂ ವಾರ್ಷಿಕ 50 ಲಕ್ಷ ರೂಪಾಯಿ ಪಡೆಯುವುದು<br>— ಯುದ್ಧನಷ್ಟ ಪರಿಹಾರವಾಗಿ 50 ಲಕ್ಷ ರೂಪಾಯಿ ಕೊಡಬೇಕಾಯಿತು<br>— ಮಿರ್ ಜಾಫರ್‌ನ ಮಗನಿಗೆ ವಿಶ್ರಾಂತಿ ವೇತನ<br>— ಬಂಗಾಳದ ಪೂರ್ಣ ಆಡಳಿತ ನಿರ್ವಹಣೆ<br>— ದ್ವಿ-ಪ್ರಭುತ್ವ ಜಾರಿ<br>— ಭಾರತದಲ್ಲಿ ರಾಜಕೀಯ ಪರಮಾಧಿಕಾರ ಸ್ಥಾಪನೆ 6 × ½ | 3 |
| 37. | ಪ್ರಾರ್ಥನಾ ಸಮಾಜದ ಗುರಿಗಳೇನು ?<br>**ಅಥವಾ**<br>ಮಂದಗಾಮಿಗಳು ಬ್ರಿಟಿಷ್ ಸರ್ಕಾರದ ಮುಂದಿಟ್ಟ ಬೇಡಿಕೆಗಳಾವವು ?<br>***ಉತ್ತರ :***<br>— ಮಾನವನ ಸೇವೆಯೇ ಪರಮಾತ್ಮನ ಸೇವೆ<br>— ಶಿಕ್ಷಣ ಪ್ರಸಾರಕ್ಕೆ ಹೆಚ್ಚಿನ ಆದ್ಯತೆ<br>— ಡೆಕ್ಕನ್ ಶಿಕ್ಷಣ ಸಂಸ್ಥೆಯ ಮೂಲಕ ಶಿಕ್ಷಣ ಕ್ಷೇತ್ರದ ಪ್ರಗತಿ<br>— ವಿಧವಾ ವಿವಾಹಕ್ಕೆ ಪ್ರೋತ್ಸಾಹ<br>— ಸ್ತ್ರೀ ಶಿಕ್ಷಣಕ್ಕೆ ಪ್ರೋತ್ಸಾಹ<br>— ಅಂತರ್ಜಾತಿ ವಿವಾಹ ಪ್ರೋತ್ಸಾಹ | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯ ಮಾಪನ | ಅಂಕಗಳು |
|---|---|---|
| | — ಸಹಭೋಜನ ಕಾರ್ಯಕ್ರಮ | |
| | — ಬಾಲ್ಯವಿವಾಹ ವಿರೋಧ | |
| | — ಜಾತಿ ಪದ್ಧತಿ ವಿರೋಧ | |
| | — ವಿಗ್ರಹಾರಾಧನೆಗೆ ವಿರೋಧ | |
| | — ಪರ್ದಾ ಪದ್ಧತಿಗೆ ವಿರೋಧ | |
| | — ಅನಾಥಾಲಯ, ರಾಷ್ಟ್ರೀಯ ಶಾಲೆಗಳ ಸ್ಥಾಪನೆ | |
| | (ಯಾವುದಾದರೂ ಆರು) 6 × ½ | 3 |
| | **ಅಥವಾ** | |
| | — ದೇಶದಲ್ಲಿ ಕೈಗಾರಿಕೆಗಳ ಅಭಿವೃದ್ಧಿ | |
| | — ಸೈನಿಕ ವೆಚ್ಚ ಕಡಿಮೆ ಮಾಡುವುದು | |
| | — ಉತ್ತಮ ಶಿಕ್ಷಣ ಕೊಡುವುದು | |
| | — ಬಡತನದ ಬಗ್ಗೆ ಅಧ್ಯಯನ ನಡೆಸುವುದು | |
| | — ರಾಜಕೀಯ ಶಿಕ್ಷಣ ನೀಡಲು ಪ್ರಯತ್ನ | |
| | — ಬಡತನದ ಪರಿಹಾರ ಕಾರ್ಯಕ್ರಮಕ್ಕಾಗಿ ಒತ್ತಾಯ 6 × ½ | 3 |
| 38. | ಮಾನವ ಹಕ್ಕುಗಳ ಪ್ರತಿಪಾದನೆಗೆ ಭಾರತ ಹೇಗೆ ಶ್ರಮಿಸುತ್ತಿದೆ ? | |
| | ***ಉತ್ತರ :*** | |
| | — ಸ್ವಾತಂತ್ರ್ಯ | |
| | — ಸಮಾನತೆ | |
| | — ಘನತೆಯನ್ನು ಹೊಂದಿಸುವುದು | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯ ಮಾಪನ | ಅಂಕಗಳು |
|---|---|---|
| | — ಜೀವಿಸುವ ಸ್ವಾತಂತ್ರ್ಯ<br>— ವೈಯಕ್ತಿಕ ಭದ್ರತೆ<br>— ಗುಲಾಮಗಿರಿ ಪದ್ಧತಿ ನಿಷೇಧ<br>— ಮಹಿಳಾ ಶೋಷಣೆ ಮುಕ್ತ<br>— ಸಾರ್ವತ್ರಿಕ ಹಕ್ಕುಗಳ ನಿರಂತರ ಪ್ರತಿಪಾದನೆ<br>— ಸಂವಿಧಾನದ ಮೂರನೇ ಭಾಗದಲ್ಲಿ ಮೂಲಭೂತ ಹಕ್ಕುಗಳ ನಮೂದನೆ<br>— ವಿಶ್ವಾದ್ಯಂತ ಮಾನವ ಹಕ್ಕುಗಳ ಸುರಕ್ಷತೆಗೆ ಭಾರತ ಸಮರ್ಥನೆ<br>(ಯಾವುದಾದರೂ ಆರು) 6 × ½ | 3 |
| 39. | ಅಸಂಘಟಿತ ವಲಯದ ಕೆಲಸಗಾರರು ಎದುರಿಸುತ್ತಿರುವ ಸಮಸ್ಯೆಗಳನ್ನು ಪಟ್ಟಿಮಾಡಿ.<br>***ಉತ್ತರ :***<br>— ಯಾವುದೇ ನಿಗದಿತ ನಿಯಮ ಕಾಯ್ದೆಗಳಿರುವುದಿಲ್ಲ<br>— ದುಡಿಮೆಗೆ ಕಡಿಮೆ ಕೂಲಿ ನೀಡಿಕೆ<br>— ಉಚಿತ ವೈದ್ಯಕೀಯ ಸೌಲಭ್ಯಗಳಿಲ್ಲ<br>— ಕೆಲಸಕ್ಕೆ ಭದ್ರತೆ ಇಲ್ಲ<br>— ನಿಗದಿತ ವೇತನ ಸೌಲಭ್ಯಗಳಿಲ್ಲ<br>— ವಿರಾಮ ವೇತನವಿಲ್ಲ<br>— ನಿವೃತ್ತಿ ವೇತನವಿಲ್ಲ<br>— ಭತ್ಯೆ ಸೌಲಭ್ಯಗಳಿರುವುದಿಲ್ಲ<br>— ಉದ್ಯೋಗಪತಿಗಳಿಂದ ಹಲವು ಬಗೆಯ ಶೋಷಣೆಗೆ ಒಳಗಾಗುತ್ತಾರೆ<br>(ಯಾವುದಾದರೂ ಆರು) 6 × ½ | 3 |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| 40. | ಮಣ್ಣಿನ ಸವೆತವು ಅನೇಕ ಸಮಸ್ಯೆಗಳಿಗೆ ಕಾರಣವಾಗುತ್ತದೆ. ಸ್ಪಷ್ಟೀಕರಿಸಿ.<br>***ಉತ್ತರ :***<br>— ನದಿಗಳಲ್ಲಿ ಹೂಳು ತುಂಬಿ ಪ್ರವಾಹಕ್ಕೆ ಕಾರಣ<br>— ನದಿಗಳು ತಮ್ಮ ಪಾತ್ರ ಬದಲಾಯಿಸುತ್ತವೆ<br>— ಜಲಾಶಯ ಕೆರೆಗಳಲ್ಲಿ ನೀರು ಸಂಗ್ರಹ ಸಾಮರ್ಥ್ಯ ಕಡಿಮೆಯಾಗುತ್ತದೆ<br>— ಭೂಮಿಯಲ್ಲಿ ನೀರು ಇಂಗುವ ಪ್ರಮಾಣ ಕಡಿಮೆ<br>— ಸ್ವಾಭಾವಿಕ ಚಿಲುಮೆ ಬತ್ತುವುದು<br>— ವ್ಯವಸಾಯ ಭೂಮಿಯ ಫಲವತ್ತತೆ ಕಡಿಮೆಯಾಗುತ್ತದೆ<br>— ಉತ್ಪಾದನಾ ಪ್ರಮಾಣ ಕಡಿಮೆಯಾಗುತ್ತದೆ<br>— ಕ್ರಮೇಣ ಬಂಜರು ಭೂಮಿಯಾಗಿ ಪರಿವರ್ತನೆ<br>— ಮಣ್ಣಿನ ತೇವಾಂಶ ಕಡಿಮೆಯಾಗುವುದು<br>— ಸಸ್ಯವರ್ಗ ನಾಶವಾಗುವುದು<br>— ಬರ ಪರಿಸ್ಥಿತಿ ಹೆಚ್ಚುವುದು<br>(ಯಾವುದಾದರೂ ಆರು) $6 \times \frac{1}{2}$ | 3 |
| 41. | ಭಾರತದ ಪೂರ್ವತೀರದಲ್ಲಿ ಕಂಡುಬರುವ ಪ್ರಮುಖ ಬಂದರುಗಳನ್ನು ಪಟ್ಟಿಮಾಡಿ.<br>**ಅಥವಾ**<br>ಭೂಕಂಪದ ಮುನ್ನೆಚ್ಚರಿಕೆಯ ಕ್ರಮಗಳನ್ನು ಪಟ್ಟಿಮಾಡಿ.<br>***ಉತ್ತರ :***<br>— ತುತುಕುಡಿ<br>— ಚೆನ್ನೈ | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯ ಮಾಪನ | ಅಂಕಗಳು |
|---|---|---|
| | — ಎನ್ನೋರ್<br>— ವಿಶಾಖ ಪಟ್ಟಣಂ<br>— ಪಾರಾದೀಪ<br>— ಹಾಲ್ದಿಯಾ<br>— ಕೋಲ್ಕತ್ತ<br>(ಯಾವುದಾದರೂ ಆರು) 6 × ½ | 3 |
| | **ಅಥವಾ**<br>— ಭೂಕಂಪನ ವಲಯದಲ್ಲಿ ಬಹು ಅಂತಸ್ತಿನ ಕಟ್ಟಡಗಳ ನಿಷೇಧ<br>— ಕಟ್ಟಡಗಳನ್ನು ಹಗುರವಾದ ವಸ್ತುಗಳಿಂದ ನಿರ್ಮಾಣ<br>— ಕಟ್ಟಡಗಳು ಸ್ಥಿತಿಸ್ಥಾಪಕತ್ವ ಗುಣ ಹೊಂದುವಂತೆ ನಿರ್ಮಾಣ<br>— ಭೂಕಂಪನ ಸಂಭವಿಸಿದಾಗ ಹೇಗೆ ವರ್ತಿಸಬೇಕೆಂದು ಜನರಿಗೆ ತಿಳುವಳಿಕೆ ನೀಡುವುದು<br>— ಶೀಘ್ರ ವೈದ್ಯಕೀಯ ಸೇವೆ ಸಿಗುವಂತೆ ವ್ಯವಸ್ಥೆ<br>— ಸಿದ್ಧಪಡಿಸಿದ ಆಹಾರ ಹಂಚಿಕೆ ವ್ಯವಸ್ಥೆ<br>— ಶುದ್ಧ ಕುಡಿಯುವ ನೀರಿನ ಪೂರೈಕೆ<br>— ಔಷಧಿ ಹಂಚಿಕೆ<br>— ತಾತ್ಕಾಲಿಕ ವಸತಿ ವ್ಯವಸ್ಥೆ<br>— ಅಗತ್ಯ ಮೂಲಭೂತ ಸೌಕರ್ಯಗಳಿಗೆ ಕ್ರಮ<br>(ಯಾವುದಾದರೂ ಆರು) 6 × ½ | 3 |
| 42. | ಮಹಿಳಾ ಸ್ವಸಹಾಯ ಸಂಘಗಳು ಮಹಿಳಾ ಸಬಲೀಕರಣಕ್ಕೆ ಪೂರಕವಾಗಿವೆ. ಸಮರ್ಥಿಸಿ.<br>**ಅಥವಾ**<br>ಗ್ರಾಮೀಣಾಭಿವೃದ್ಧಿಯಲ್ಲಿ ಮಹಿಳೆಯರ ಪಾತ್ರ ಪ್ರಮುಖವಾದದ್ದು. ಸಮರ್ಥಿಸಿ. | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯ ಮಾಪನ | ಅಂಕಗಳು |
|---|---|---|
| | ***ಉತ್ತರ :*** | |
| | — ಸದಸ್ಯರು ತಮ್ಮಲ್ಲಿರುವ ಅಲ್ಪ ಪ್ರಮಾಣದ ಸಂಪನ್ಮೂಲಗಳನ್ನು ಕ್ರೋಢೀಕರಿಸಿ, ಬಾಹ್ಯ ಸಹಾಯವನ್ನು ಪಡೆದು, ವ್ಯವಹಾರ ಆರಂಭಿಸಿ, ವರಮಾನ ಹೆಚ್ಚಿಸಿಕೊಳ್ಳಲು ಪ್ರಯತ್ನಿಸುತ್ತಾರೆ. | |
| | — ಲೆಕ್ಕ ನಿರ್ವಹಣೆ, ಬ್ಯಾಂಕಿನ ಜೊತೆ ವ್ಯವಹರಿಸುವುದಲ್ಲದೇ ವರಮಾನ ಸೃಷ್ಟಿಸುವಂಥ ಉದ್ಯೋಗಗಳ ಕುರಿತು ಅವರಿಗೆ ತರಬೇತಿಯನ್ನು ನೀಡಲಾಗುತ್ತದೆ. | |
| | — ಸ್ವಸಹಾಯ ಸಮೂಹಗಳು ಮಹಿಳೆಯರ ವರಮಾನ ಹಾಗೂ ಉಳಿತಾಯಗಳ ವೃದ್ದಿಗೆ ಕಾರಣವಾಗುತ್ತದೆ. | |
| | — ಅವರು ತಮ್ಮ ಇಚ್ಛಾನುಸಾರ ಖರ್ಚು ಮಾಡುವುದಕ್ಕೂ ಅನುವು ಮಾಡಿಕೊಟ್ಟಿವೆ. | |
| | — ಮಹಿಳೆಯರ ಘನತೆ ಹಾಗೂ ಸ್ವಾಯತ್ತತೆ ಹೆಚ್ಚಿಸುತ್ತದೆ. | 3 |
| | **ಅಥವಾ** | |
| | — ಕೃಷಿ | |
| | — ಕಾರ್ಮಿಕ | |
| | — ನೌಕರ | |
| | — ಅಧಿಕಾರಿ | |
| | — ಉದ್ಯಮಿ | |
| | — ನೀತಿ ನಿರೂಪಕ | |
| | — ಪುಷ್ಪ ಕೃಷಿ | |
| | — ಕೋಳಿ ಸಾಕಾಣೆ | |
| | — ವ್ಯಾಪಾರಿ ಸಂಸ್ಥೆಗಳು | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯ ಮಾಪನ | ಅಂಕಗಳು |
|---|---|---|
| | — ಶಿಕ್ಷಣ ಸಂಸ್ಥೆಗಳು<br>— ಆಸ್ಪತ್ರೆಗಳು<br>— ವೃದ್ಧಾಶ್ರಮಗಳು<br>— ವಿದ್ಯಾವಂತ ಮಹಿಳೆ ಜನಸಂಖ್ಯಾ ನಿಯಂತ್ರಣದಲ್ಲಿ ಪ್ರಮುಖ ಪಾತ್ರ<br>— ಸ್ಥಳೀಯ ಸಂಸ್ಥೆಗಳಲ್ಲಿ ರಾಜಕೀಯ ಪ್ರವೇಶ<br>(ಯಾವುದಾದರೂ ಆರು) 6 × ½ | 3 |
| 43. | ಉದ್ಯಮಶೀಲತೆಯ ಗುಣಲಕ್ಷಣಗಳನ್ನು ತಿಳಿಸಿ.<br>**ಅಥವಾ**<br>ಬ್ಯಾಂಕುಗಳು ಗ್ರಾಹಕನಿಗೆ ಹಲವಾರು ಸೇವೆಗಳನ್ನು ಸಲ್ಲಿಸುತ್ತವೆ. ವಿವರಿಸಿ.<br>***ಉತ್ತರ :***<br>— ಸೃಜನಾತ್ಮಕ<br>— ಕ್ರಿಯಾತ್ಮಕ<br>— ಗುಂಪು ಕಟ್ಟುವುದು<br>— ಸಮಸ್ಯೆಯ ಪರಿಹಾರ<br>— ನಷ್ಟ ಭರಿತಕ್ಕೆ ಸಿದ್ಧ<br>— ವಚನ ಬದ್ಧತೆ<br>— ಹೊಸ ಪದ್ಧತಿಯನ್ನು ರೂಢಿಸಿ ತರುವುದು<br>— ನಾಯಕತ್ವ<br>— ಪ್ರಚೋದನೆಯ ಸಾಧನೆ<br>— ಗುರಿ ಮುಟ್ಟುವಿಕೆ<br>— ನಿರ್ಧಾರಗಳನ್ನು ಕೈಗೆತ್ತಿಕೊಳ್ಳುವುದು<br>(ಯಾವುದಾದರೂ ಆರು) 6 × ½ | 3 |
| | **ಅಥವಾ** | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯ ಮಾಪನ | ಅಂಕಗಳು |
|---|---|---|
| | — ಜಮಾ ಕಾರ್ಡ್ (ಕ್ರೆಡಿಟ್ ಕಾರ್ಡ್) ಕೊಡುವುದು<br>— ಖಾಸಗಿ ಸಾಲಗಳು<br>— ಮನೆ ಕಟ್ಟಲು ಸಾಲ ಅಥವಾ ವಾಹನ ಖರೀದಿಸಲು ಸಾಲ ನೀಡುವುದು<br>— ಪರಸ್ಪರ ನಿಧಿಗಳನ್ನು ನಿರ್ವಹಿಸುವುದು<br>— ವ್ಯಾಪಾರಕ್ಕೆ ಬೇಕಾದ ಸಾಲಗಳು<br>— ಭದ್ರತಾ ಅಥವಾ ರಕ್ಷಣಾ ಕಪಾಟುಗಳನ್ನು ಕೊಡುವುದು<br>— ಡೆಬಿಟ್ ಕಾರ್ಡ್<br>— ಭರವಸೆ ಸೇವೆಗಳು<br>— ಸಹಿಗಳಿಗೆ ಜವಾಬ್ದಾರಿ ಹಾಕುವುದು<br>(ಯಾವುದಾದರೂ ಆರು) 6 × ½ | 3 |
| **V.** | **ಎಂಟರಿಂದ ಹತ್ತು ವಾಕ್ಯಗಳಲ್ಲಿ ಉತ್ತರಿಸುವುದು : 4 × 4 = 16** | |
| 44. | ಭಾರತ ಒಕ್ಕೂಟಕ್ಕೆ ಬೇರೆಲ್ಲಾ ಸಂಸ್ಥಾನಗಳ ವಿಲೀನಕ್ಕಿಂತ ಕಾಶ್ಮೀರದ ವಿಲೀನವು ವಿಶಿಷ್ಟವಾಗಿದೆ. ಹೇಗೆ ?<br>***ಉತ್ತರ :***<br>— ರಾಜ ಹರಿಸಿಂಗ್ ಸ್ವತಂತ್ರವಾಗುಳಿಯಲು ನಿರ್ಧಾರ<br>— ಭಾರತಕ್ಕೆ ಸೇರಿಬಿಡಬಹುದೆಂಬ ಆತಂಕ<br>— ಪಾಕಿಸ್ತಾನವು ಮುಸ್ಲಿಂ ಬುಡಕಟ್ಟು ಜನರಿಂದ ದಾಳಿಗೆ ಪ್ರಚೋದನೆ<br>— ಶೇಕ್ ಅಬ್ದುಲ್ಲಾನ ನ್ಯಾಷನಲ್ ಕಾನ್ಫೆರೆನ್ಸ್ ಪಕ್ಷವು ಧಾರ್ಮಿಕ ಸಂವಿಧಾನಕ್ಕಿಂತ ಪ್ರಜಾಪ್ರಭುತ್ವ ಗಣರಾಜ್ಯ ಭಾರತಕ್ಕೆ ಸೇರಲು ಉತ್ಸುಕ<br>— ರಾಜ ಹರಿಸಿಂಗ್ ಭಾರತ ಸರ್ಕಾರದ ಸಹಾಯ ಕೋರಿದ<br>— ಪಾಕಿಸ್ತಾನದ ಉದ್ದೇಶ ವಿಫಲ<br>— ಕಾಶ್ಮೀರ ಕೆಲವು ಷರತ್ತುಗಳೊಂದಿಗೆ ಭಾರತದಲ್ಲಿ ವಿಲೀನ | |


| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯ ಮಾಪನ | ಅಂಕಗಳು |
| --- | --- | --- |
| | — ಕಾಶ್ಮೀರದ ಒಂದು ಭಾಗ ಪಾಕಿಸ್ತಾನದ ವಶ ( POK )<br>— ಭಾರತ ವಿಶ್ವಸಂಸ್ಥೆಗೆ ದೂರು ಸಲ್ಲಿಕೆ<br>— ವಿಶ್ವಸಂಸ್ಥೆ ಕದನ ವಿರಾಮದ ಆದೇಶ<br>— ಪಾಕಿಸ್ತಾನ ಆಕ್ರಮಿಸಿದ ಪ್ರದೇಶವನ್ನು ಪಾಕ್ ಆಕ್ರಮಿತ ಪ್ರದೇಶ ಎಂದು ( POK ) ಕರೆಯಲಾಗುತ್ತದೆ<br>— ಭಾರತದ ವಶದಲ್ಲಿರುವ ಕಾಶ್ಮೀರ ಪ್ರದೇಶವನ್ನು ಪಾಕಿಸ್ತಾನವು. "ಭಾರತ ಆಕ್ರಮಿತ ಪ್ರದೇಶ" ಎಂದು ( IOK ) ಕರೆಯುತ್ತಾರೆ<br>— ಈ ಮೇಲಿನ ಕಾರಣಗಳಿಂದ ಕಾಶ್ಮೀರ ವಿಲೀನ ಬಹು ವಿಶಿಷ್ಟ<br>(ಯಾವುದಾದರೂ ಎಂಟು) $8 \times \frac{1}{2}$ | 4 |
| 45. | ಇತ್ತೀಚಿನ ದಿನಗಳಲ್ಲಿ ಚೀನಾದೊಂದಿಗೆ ಭಾರತದ ಬಾಂಧವ್ಯ ಹದಗೆಟ್ಟಿದೆ. ಏಕೆ ?<br>***ಉತ್ತರ :***<br>— 1949 ರಲ್ಲಿ ಚೀನಾ ಕಮ್ಯೂನಿಷ್ಟ್ ರಾಷ್ಟ್ರ ಉದಯ<br>— ಭಾರತವು ಚೀನಾ ಕಮ್ಯೂನಿಷ್ಟ್ ರಾಷ್ಟ್ರದ ಮಾನ್ಯತೆ ನೀಡಿದೆ<br>— ಹಿಂದಿ-ಚೀನೀ ಭಾಯಿಭಾಯಿ ತತ್ವ ಬೆಳೆಸಿಕೊಳ್ಳಲು ಪ್ರಯತ್ನ<br>— ಪಂಚಶೀಲ ತತ್ವಗಳಿಗೆ ಒಪ್ಪಿ ಸಹಿ ಮಾಡಲಾಗಿದೆ<br>— ಚೀನಾದಿಂದ ರಚನಾತ್ಮಕ ಸಹಕಾರ ನಿರೀಕ್ಷಿತ ಫಲ ನೀಡಿರುವುದಿಲ್ಲ<br>— ಭಾರತದ ಧೋರಣೆಯ ವಿರುದ್ಧ ಚೀನಾ ಟಿಬೇಟ್ ವಶ<br>— 1962 ರಲ್ಲಿ ಚೀನಾ ಭಾರತ ಯುದ್ಧ<br>— ಭಾರತಕ್ಕೆ ಚೀನಾ ವಿರುದ್ಧ ಸೋಲು<br>— ಅರುಣಾಚಲ ಪ್ರದೇಶ ತನ್ನದೆಂದು ಚೀನಾ ಪ್ರತಿಪಾದನೆ<br>— ಭಾರತ-ಚೀನಾ ಪರಸ್ಪರ ಸಂಬಂಧಗಳ ಮೇಲೆ ದುಷ್ಪರಿಣಾಮಗಳು<br>— ಮಾವೋವಾದಿಗಳು ಭಾರತದಲ್ಲಿ ನಕ್ಸಲ್‌ವಾದ ಪಸರಿಸಲು ಚೀನಾ ಕುಮ್ಮಕ್ಕು<br>— ಭಾರತ ಚೀನಾ ನಡುವೆ ಮನಸ್ತಾಪವಿದೆ | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯ ಮಾಪನ | ಅಂಕಗಳು |
|---|---|---|
| | — ಗಡಿಯೂ ಅಂತಿಮ ನಿರ್ಣಯವಾಗಿಲ್ಲ<br>— ಗಡಿರೇಖೆ ನಿಖರವಾಗಿ ಇರುವುದಿಲ್ಲ<br>— ವಾಸ್ತವಿಕ ನಿಯಂತ್ರಣ ರೇಖೆ ಮಾತ್ರ ಇದೆ<br>— ಎರಡೂ ರಾಷ್ಟ್ರಗಳು ಅಣ್ವಸ್ತ್ರ ತಯಾರಿ ನಡೆಸಿವೆ<br>— ವಿದೇಶಿ ವ್ಯಾಪಾರದ ಸವಾಲುಗಳು<br>— ಗಡಿಯಲ್ಲಿ ಮಿಲಿಟರಿ ಪಡೆಗಳ ಅತಿಕ್ರಮಣ<br>(ಯಾವುದಾದರೂ ಎಂಟು) $8 \times \frac{1}{2}$ | 4 |
| 46. | "ಭಾರತದ ಆರ್ಥಿಕತೆಯಲ್ಲಿ ವ್ಯವಸಾಯವು ಪ್ರಮುಖ ಪಾತ್ರವನ್ನು ವಹಿಸುತ್ತದೆ." ಸ್ಪಷ್ಟೀಕರಿಸಿ.<br>***ಉತ್ತರ :***<br>— ವ್ಯವಸಾಯವು ಮಾನವನ ಪುರಾತನ ವೃತ್ತಿ<br>— ನಾಗರಿಕತೆ ಬೆಳೆಯಲು ಕೃಷಿ ಪ್ರಮುಖ ಪಾತ್ರವಾಗಿದೆ<br>— ಭಾರತೀಯರ ಪ್ರಮುಖ ಉದ್ಯೋಗ<br>— ದೇಶದಲ್ಲಿ ವಿವಿಧ ರೂಪದ ಉತ್ಪಾದನೆಯಲ್ಲಿ ತೊಡಗಿರುವುದು<br>— ಆಹಾರದ ಪೂರೈಕೆ<br>— ಜಾನುವಾರುಗಳಿಗೆ ಮೇವು<br>— ಕೈಗಾರಿಕೆಗಳಿಗೆ ಕಚ್ಚಾವಸ್ತುಗಳನ್ನು ಪೂರೈಕೆ<br>— ವ್ಯವಸಾಯವು ಪರೋಕ್ಷವಾಗಿ ಹಲವು ಕೈಗಾರಿಕೆಗಳನ್ನು ಪೋಷಿಸುತ್ತದೆ<br>— ರಾಸಾಯನಿಕ ಗೊಬ್ಬರ, ಕೀಟನಾಶಕ ಯಂತ್ರೋಪಕರಣ ಕೈಗಾರಿಕೆಗಳಿಗೆ ಪೂರಕ ಕಾರ್ಯ<br>— ವ್ಯವಸಾಯವು ಸಂಚಾರ, ಸಾರಿಗೆ, ವ್ಯಾಪಾರದಂತಹ ತೃತೀಯಾ ಆರ್ಥಿಕ ಉದ್ಯೋಗಗಳನ್ನು ಪೋಷಿಸಿದೆ<br>— ಪರಿಸರ ಸಮತೋಲನಕ್ಕೂ ಸಹಕಾರಿ<br>(ಯಾವುದಾದರೂ ಎಂಟು) $8 \times \frac{1}{2}$ | 4 |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯ ಮಾಪನ | ಅಂಕಗಳು |
|---|---|---|
| 47. | ಭಾರತದ ಪ್ರಥಮ ಸ್ವಾತಂತ್ರ್ಯ ಸಂಗ್ರಾಮಕ್ಕೆ ರಾಜಕೀಯ ಹಾಗೂ ಆರ್ಥಿಕ ಕಾರಣಗಳನ್ನು ವಿವರಿಸಿ.<br>**ಅಥವಾ**<br>ಜಲಿಯನ್ ವಾಲಾಬಾಗ್ ಹತ್ಯಾಕಾಂಡವನ್ನು ವಿವರಿಸಿ.<br>***ಉತ್ತರ :***<br>***ರಾಜಕೀಯ ಕಾರಣಗಳು :***<br>— ‘ದತ್ತು ಮಕ್ಕಳಿಗೆ ಹಕ್ಕಿಲ್ಲ’ ನೀತಿ<br>— ದೇಶಿಯ ಸಂಸ್ಥಾನ ಅಸ್ತಿತ್ವ ಕಳೆದುಕೊಳ್ಳಬೇಕಾಯಿತು<br>— ಸತಾರ, ಜೈಪುರ, ಝಾನ್ಸಿ, ಉದಯಪುರ ಬ್ರಿಟಿಷರ ವಶ<br>— ತಂಜಾವೂರು, ಕರ್ನಾಟಿಕ್ ನವಾಬಗಿರಿ ರದ್ದು<br>— ಔದ್‌ನ ನವಾಬ ಮೊದಲಾದ ರಾಜರುಗಳ ಪದಚ್ಯುತಿ<br>— ಲಕ್ಷಾಂತರ ಸೈನಿಕರು ನಿರುದ್ಯೋಗಿಗಳಾದರು<br>***ಆರ್ಥಿಕ ಕಾರಣಗಳು :***<br>— ಕೈಗಾರಿಕಾ ಕ್ರಾಂತಿಯಿಂದ ಭಾರತೀಯ ಕರಕುಶಲತೆ ಕ್ಷೀಣ<br>— ದೇಶಿಯ ಕೈಗಾರಿಕೆಗಳು ಕ್ಷೀಣಿಸಿದವು<br>— ಇಂಗ್ಲೆಂಡ್ ವ್ಯಾಪಾರಿ ರಾಷ್ಟ್ರವಾಯಿತು<br>— ಇಂಗ್ಲೆಡ್ ಕೈಗಾರಿಕಾ ಕಾರ್ಯಗಾರಗೊಂಡಿತು<br>— ಕರಕುಶಲಗಾರರು ನಿರುದ್ಯೋಗಿಗಳಾದರು<br>— ಬಟ್ಟೆ ಮತ್ತು ಉಣ್ಣೆ ಕೈಗಾರಿಕೆಗಳ ಅವನತಿ<br>— ನೇಕಾರರು ಉದ್ಯೋಗ ಕಳೆದುಕೊಂಡರು<br>— ಭಾರತದ ವಸ್ತುಗಳ ಮೇಲೆ ಬ್ರಿಟಿಷರು ದುಬಾರಿ ಸುಂಕ ಹೇರಿದರು<br>— ಜಮೀನ್ದಾರಿ ಪದ್ಧತಿಯಿಂದ ಕೃಷಿಕರ ಶೋಷಣೆ<br>— ಇನಾಂ ಭೂಮಿಯನ್ನು ವಾಪಸ್ ಪಡೆಯಲಾಯಿತು<br>— ಕೃಷಿಕರು ತೀವ್ರ ಆರ್ಥಿಕ ನಷ್ಟ ಅನುಭವಿಸಿದರು<br>(ಯಾವುದಾದರೂ ಆರು) $8 \times \frac{1}{2}$ | 4 |
| | **ಅಥವಾ** | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| | — ರೌಲತ್ ಕಾಯ್ದೆ ವಿರೋಧಿಸಿ ವ್ಯಾಪಕ ಚಳುವಳಿ<br>— ಚಳುವಳಿ ಹಿಂಸಾತ್ಮಕ ಸ್ವರೂಪ ಪಡೆಯಿತು<br>— ಅಮೃತಸರ ಜನರಲ್ 'ಡಯರ್ ಸೇವಾ ಉಸ್ತುವಾರಿ'<br>— ಪ್ರಕ್ಷುಬ್ಧ ಪರಿಸ್ಥಿತಿ ನಿರ್ಮಾಣ<br>— ಸೇನಾಳ್ವಿಕೆಗೆ ಒಳಪಡಿಸಿ ಸಭೆಗಳ ನಿಷೇಧ<br>— ಜಲಿಯನ್ ವಾಲಾಬಾಗ್‌ನಲ್ಲಿ ಸಭೆ ಸೇರಲು ಹೋರಾಟಗಾರರ ಪೂರ್ವ ನಿರ್ಧಾರಿತ<br>— ನಿಷೇಧದ ಬಗ್ಗೆ ಹೋರಾಟಗಾರರಿಗೆ ಪೂರ್ಣ ತಿಳುವಳಿಕೆ ಇರಲಿಲ್ಲ<br>— 20 ಸಾವಿರ ಪ್ರತಿಭಟನಾಕಾರರು ಸಭೆಯಲ್ಲಿ ಭಾಗಿ<br>— ಸುತ್ತಲೂ ಎತ್ತರದ ಗೋಡೆ, ಕಿರಿದಾದ ಪ್ರವೇಶ ದ್ವಾರ<br>— ಶಾಂತಿಯುತ ಸಭೆ<br>— ಜನರಲ್ ಡಯರ್ ಮುನ್ಸೂಚನೆ ನೀಡದೆ ಅಮಾನುಷಕರ ಗುಂಡಿನ ದಾಳಿಗೆ ಆದೇಶ<br>— 379 ಪ್ರತಿಭಟನಾಕಾರರ ಸಾವು<br>— ಸಾವಿರಾರು ಜನರಿಗೆ ಗಾಯ<br>— ಈ ಘಟನೆ ಜಲಿಯನ್ ವಾಲಾಬಾಗ್ ದುರಂತ<br>— ಹಂಟರ್ ಆಯೋಗ ನೇಮಕ, ವಿಚಾರಣೆ<br>— ಯಾವುದೇ ಪ್ರಯೋಜನವಾಗಲಿಲ್ಲ<br>— ಭಾರತೀಯರ ಮೇಲೆ ದೌರ್ಜನ್ಯ ಮುಂದುವರೆಯಿತು<br>(ಯಾವುದಾದರೂ ಎಂಟು) $8 \times \frac{1}{2}$ | 4 |
| **VI.** 48. | **ಭಾರತದ ನಕ್ಷೆಯನ್ನು ಬರೆದು, ಅದರಲ್ಲಿ ಈ ಕೆಳಗಿನವುಗಳನ್ನು ಗುರುತಿಸಿ :** **1 + 4 = 5**<br>a) $82\frac{1}{2}^{\circ}$ ಪೂರ್ವ ರೇಖಾಂಶ<br>b) ಕೊಚ್ಚಿ<br>c) ವಿಶಾಖ ಪಟ್ಟಂ<br>d) ಕೋಯ್ನಾ | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯ ಮಾಪನ | ಅಂಕಗಳು |
|---|---|---|
| | *ಉತ್ತರ :* | |




***ದೃಷ್ಟಿ ವಿಕಲಚೇತನ ವಿದ್ಯಾರ್ಥಿಗಳಿಗೆ ಪರ್ಯಾಯ ಪ್ರಶ್ನೆ:***

***(ಪ್ರಶ್ನೆ ಸಂಖ್ಯೆ 48 ರ ಬದಲಿಗೆ)***

ವಿವಿಧೋದ್ದೇಶ ನದಿ ಕಣಿವೆ ಯೋಜನೆಗಳ ಮುಖ್ಯ ಉದ್ದೇಶಗಳನ್ನು ತಿಳಿಸಿ.

— ನೀರಾವರಿ ಸೌಲಭ್ಯ

— ಜಲವಿದ್ಯುಚ್ಛಕ್ತಿ ಉತ್ಪಾದನೆ

— ಪ್ರವಾಹಗಳ ನಿಯಂತ್ರಣ

— ನೌಕಾಯಾನ

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯ ಮಾಪನ | ಅಂಕಗಳು |
|---|---|---|
| | — ಗೃಹ ಬಳಕೆಗೆ ನೀರು | |
| | — ಕೈಗಾರಿಕೆಗೆ ನೀರು | |
| | — ಮಣ್ಣಿನ ಸವಕಳಿ ನಿಯಂತ್ರಣ | |
| | — ಒಳನಾಡಿನ ನೌಕಾಯಾನ | |
| | — ಮೀನುಗಾರಿಕೆ ವೃದ್ಧಿ | 5 |
| | — ಅರಣ್ಯ ಸಂಪತ್ತು ವೃದ್ಧಿ $10 \times \frac{1}{2}$ | |